ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್
31 : (248)

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ (ಕನಕಗಿರಿ)

ಅ) ಕನಕಗಿರಿ ಕ್ಷೇತ್ರದ ಕಾರಟಗಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ರೈಸ್ ಟೆಕ್ನಾಲಜಿ ಪಾರ್ಕ್‌ಗೆ 2010–11 ಹಾಗೂ 2011–12ನೇ ಸಾಲಿನಲ್ಲಿ ಬಿಡುಗಡೆಯಾದ ಹಣವೆಷ್ಟು (ಮಾಹಿತಿ ನೀಡುವುದು)

ಆ) ಬಿಡುಗಡೆಯಾದ ಹಣವನ್ನು ಯಾವ ವಿಭಾಗಕ್ಕೆ ವೆಚ್ಚ ಮಾಡಲಾಗಿದೆ.

ಇ) ರೈಸ್ ಟೆಕ್ನಾಲಜಿ ಪಾರ್ಕ್‌ಗೆ ಮೂಲ ಯೋಜನೆಯಲ್ಲಿ ಎಷ್ಟು ಭೂಮಿ ನಿಗದಿ ಮಾಡಿವೆ. ಇಲ್ಲಿಯವರೆಗೆ ಎಷ್ಟು ಭೂಮಿ ಸ್ವಾಧೀನಪಡಿಸಿ–ಕೊಳ್ಳಲಾಗಿದೆ. ಕೊಟ್ಟ ಪರಿಹಾರ ಎಷ್ಟು (ಮಾಹಿತಿ ನೀಡುವುದು)

ಈ) ಈ ಯೋಜನೆಯನ್ನು ಎಷ್ಟು ಕಾಲಾವಧಿಯಲ್ಲಿ ಸಮಗ್ರವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ (ಸಂಪೂರ್ಣ ವಿವರ ಒದಗಿಸುವುದು)?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು)

ಅ) 2010–11ಕ್ಕೆ ಬಿಡುಗಡೆಯಾಗುವುದಿಲ್ಲ. 2011–12ನೇ ಸಾಲಿನಲ್ಲಿ ರೂ. 5.00 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು ಈ ಹಣವನ್ನು ಬಿಡುಗಡೆ ಮಾಡುವ ಕುರಿತು ಪ್ರಸ್ತಾವನೆಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆ) ಅನ್ವಯಿಸುವುದಿಲ್ಲ.

ಇ) ಸರ್ಕಾರಿ ಜಮೀನು – 330.17 ಎಕರೆ
ಖಾಸಗಿ ಜಮೀನು – 140.27 ಎಕರೆ

ಒಟ್ಟು – 471.04 ಎಕರೆ

2011–12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ರೂ. 5.00 ಕೋಟಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸಲಾಗುತ್ತಿದೆ.

ಸೋಮನಾಳ ಗ್ರಾಮದ 107.21 ಎಕರೆ ಸರ್ಕಾರಿ ಜಮೀನು ಮಂಜೂರಾತಿಗಾಗಿ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರನ್ನು ಕೋರಿರುತ್ತಾರೆ.

ನವಲಿ ಮತ್ತು ಸೋಮನಾಳ ಗ್ರಾಮದ 140.27 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಮೂಲಕ ಪಡೆದುಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದ್ದು ಸ್ವಾಧೀನತಾ ವೆಚ್ಚ ರೂ. 59,44,000/– ಪಾವತಿಸಲು ಉಪ ವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಕೊಪ್ಪಳ ಇವರು ತಿಳಿಸಿರುತ್ತಾರೆ.

ಭೂಸ್ವಾಧೀನದ ವೆಚ್ಚ ಹಾಗೂ ಠೇವಣಿ ಮಾಡುವ ಸಂಬಂಧ ರೂ. 1.70 ಕೋಟಿ ಬಡ್ಡಿರಹಿತ ಸಾಲ ಬಿಡುಗಡೆಗಾಗಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರನ್ನು ಕೋರಲಾಗಿದೆ.

ಈ) ಭೂಸ್ವಾಧೀನ ಪ್ರಕ್ರಿಯೆಗೆ ತಗಲುವ ಸಮಯವನ್ನು ಹೊರತುಪಡಿಸಿ 2 ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಆದರೆ, ನಮಗೆ 2010–11ನೇ ಸಾಲಿನ ಬಜೆಟ್‌ನಲ್ಲಿ ಕೃಷಿ ಟೆಕ್ನಾಲಜಿ ಪಾರ್ಕ್ ಮಾಡುವುದಕ್ಕೆ 10 ಕೋಟಿ ರೂ. ದುಡ್ಡು ಬಿಡುಗಡೆ ಮಾಡಬೇಕು. ಅದರಲ್ಲಿ 5 ಕೋಟಿ ಹಣವನ್ನು immediate ಆಗಿ ಬಿಡುಗಡೆ ಮಾಡಬೇಕೆಂದು ಒಂದು ವರ್ಷದಿಂದ ನಾವು ವಿನಂತಿ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗನೆ 5 ಕೋಟಿ ರೂಪಾಯಿ ದುಡ್ಡು ಬಿಡುಗಡೆ ಮಾಡಬೇಕು. ಅದರ ಜೊತೆ 1.70 ಲಕ್ಷ ರೂಪಾಯಿ ಕೃಷಿ ಮಾರುಕಟ್ಟೆ ಬೋರ್ಡಿನಿಂದ ಬಡ್ಡಿ ರಹಿತ ಸಾಲ ಕೊಡಬೇಕೆಂದು ಒಂದು ವರ್ಷದ ಹಿಂದೆಯೇ ಫೈಲ್ ಬಂದಿದೆ. ಅದನ್ನು ಮಾಡಬೇಕು. ಆ ಯೋಜನೆ ಮಾಡುವುದಕ್ಕೆ ಎರಡು ವರ್ಷ ಬೇಕೆಂದು ಅವರು ಹೇಳಿದ್ದಾರೆ, ಮಾನ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ, ಅದಷ್ಟು ಬೇಗನೆ ದುಡ್ಡು ಬಿಡುಗಡೆ ಮಾಡಿದರೆ ಏಪ್ರಿಲ್ ಒಳಗೆ ಈ ಯೋಜನೆಯನ್ನು ತಾವೇ ಬಂದು ಪ್ರಾರಂಭ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದಷ್ಟು ಬೇಗನೆ ಆ ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವರಾಜ್ ತಂಗಡಗಿಯವರು ಕೇಳಿರುವಂತಹ ಪ್ರಶ್ನೆ ಹಾಗೂ ಅವರ ಬೇಡಿಕೆಗಳು ಸಮಂಜಸವಾಗಿದೆ. ಈಗಾಗಲೇ ಸ್ವಲ್ಪ ಡಿಲೇ ಆಗಿದೆ. ಕಳೆದ ಬಜೆಟ್‌ನಲ್ಲಿ 5 ಕೋಟಿ ಹಣ ಇಡಲಾಗಿತ್ತು. ಆದರೆ ಇದು ಈಗ ಭಾರಿ ವೇಗ ತೆಗೆದುಕೊಂಡಿದೆ. ಈಗಾಗಲೇ ಸುಮಾರು 90 ಎಕರೆ ಜಾಗ ನಮಗೆ ಸಿಕ್ಕಿದೆ. ನೆನ್ನೆ ಒಂದು ಕೋಟಿ 10 ಲಕ್ಷ ಹಣ ಬಿಡುಗಡೆ ಆಗಿದೆ. ನಿಮ್ಮ ಪ್ರಶ್ನೆ ಬರುತ್ತದೆ ಎಂದು ಅಲ್ಲ. ಹಣ

ಬಿಡುಗಡೆ ಮಾಡುವ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಇನ್ನು ಅಷ್ಟು ಜಾಗಗಳನ್ನು 140 ಎಕರೆ ಜಾಗ ಆಕ್ವಿಸಿಷನ್ ಮಾಡುವ ಪ್ರೊಸೀಡಿಂಗ್ಸ್ ಕೂಡ ಮುಂದುವರೆಸುತ್ತಿದ್ದೇವೆ. ಇದಕ್ಕೆ ನೀವು ಹೇಳಿದ ರೀತಿಯಲ್ಲಿ ಇನ್ನಷ್ಟು ವೇಗವನ್ನು ಕೊಟ್ಟು ಆದಷ್ಟು ಶೀಘ್ರವಾಗಿ ಇದನ್ನು ಮಾಡುವ ಕೆಲಸ ಕಾರ್ಯಗಳನ್ನು ಸರ್ಕಾರ ಮಾಡುತ್ತದೆ. ಅಧಿವೇಶನ ಮುಗಿದ ಮೇಲೆ ನೀವು, ನಾವು ಹಾಗೂ ಅಧಿಕಾರಿಗಳು ಕುಳಿತು ಇದನ್ನು ವೇಗ ಮಾಡವುದಕ್ಕೆ ಲ್ಯಾಂಡ್ ಆಕ್ವಿಸಿಷನ್ ಬಗ್ಗೆ ಏನೆಲ್ಲಾ ಮಾಡಬಹುದು ಮಾಡೋಣ. ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ಕಟ್ಟಿಕೊಂಡು ಸ್ವಾಧೀನಪಡಿಸಿಕೊಂಡವರು ಇದ್ದಾರೆ. ಅದನ್ನು ಬಿಡುಗಡೆ ಮಾಡುವ ಬಗ್ಗೆ ಆಲೋಚನೆ ಮಾಡಿದ್ದೇವೆ. ಆದಷ್ಟು ಶೀಘ್ರವಾಗಿ ಇದನ್ನು ಕೈಗೆತ್ತಿಕೊಳ್ಳುವ ಕೆಲಸಕಾರ್ಯಗಳನ್ನು ಮಾಡುತ್ತೇವೆ.

ಶ್ರೀ ಶಿವರಾಜ್ ಎಸ್. ತಂಗಡಗಿ :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಗಳ ಹತ್ತಿರ ಒಟ್ಟು 370 ಎಕರೆ ಲ್ಯಾಂಡ್ ಆಕ್ವಿಸಿಷನ್ ಬಗ್ಗೆ ಕಡತ ಬಂದಿದೆ. ತಮ್ಮ ಹತ್ತಿರವೇ ಆ ಇಲಾಖೆ ಇರುವುದರಿಂದ ಅವರಿಗೆ ಸೂಚನೆ ಕೊಡಬೇಕು. ನೀವು ದುಡ್ಡು ಬಿಡುಗಡೆ ಮಾಡಿದರೆ ಇಮ್ಮೀಡಿಯಟ್ಟಾಗಿ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಒಂದು ವಿನಂತಿ ಆ ಬ್ಯಾಲೆನ್ಸ್ 5 ಕೋಟಿ ರೂ. ಮತ್ತು 1.70 ಲಕ್ಷ ಆದಷ್ಟು ಬೇಗನೆ ಅದಕ್ಕೆ ಒಂದು ಟೈಮ್ ನಿಗದಿ ಮಾಡಿ ಹೇಳಿದರೆ ಬಹಳ ಸಂತೋಷವಾಗುತ್ತದೆ. ತಮಗೆ ಅಭಿನಂದನೆ ಸಲ್ಲಿಸುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೆ, ಸರ್ಕಾರಿ ಜಮೀನು ಏನು 300 ಎಕೆರೆ ಇದೆ. ಇದರಲ್ಲಿ ಹಲವಾರು ಜಾಗಗಳನ್ನು ಕೆಲವು ಸರ್ವೆ ನಂಬರುಗಳಲ್ಲಿ ಬೇರೆ ಬೇರೆ ಫಲಾನುಭವಿಗಳಿಗೆ 121 ಎಕೆರೆ ಅಷ್ಟು ಜಾಗ ಮಂಜೂರಾತಿ ಆಗಿದೆ. ಆದಕಾರಣ ಸರ್ಕಾರಿ ಜಾಗ ಎಂದು ಕಾಣಿಸಿದರೂ ಕೂಡ ಅದು ಮಂಜೂರಾತಿ ಆದ ಹಿನ್ನಲೆಯಲ್ಲಿ ಮಾಡುವುದಕ್ಕೆ ಆಗುತ್ತಿಲ್ಲ. ಆದರೆ ಇದಕ್ಕೆ ಬೇಕಾದ ಎಲ್ಲಾ ಜಾಗಗಳನ್ನು ತಕ್ಷಣ ಸ್ವಾಧೀನಪಡಿಸಿಕೊಳ್ಳುವುದು ಮತ್ತು ಆದಷ್ಟು ಬೇಗ ಈ ಯೋಜನೆ ಕೈಗೆತ್ತಿಕೊಳ್ಳುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಆದಷ್ಟು ಬೇಗ ಇದನ್ನು ಮಾಡುತ್ತೇವೆ.